2001-02ನೇ ಸಾಲಿನಲ್ಲಿ ಗ್ರಾಮ ಪಂಚಾಯತಿಗಳಿಗೆ ಬಿಡುಗಡೆಯಾದ ಹಣ

247 (548) ಶ್ರೀ ಗುರುಸ್ವಾಮಿ ಸಿ. (ಚಾಮರಾಜನಗರ) - ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಹಾಗೂ ಶಾಸಕರ ಅನುದಾನದ ಕಾಮಗಾರಿಗಳು ಪೂರ್ಣವಾದ ನಂತರ ಗ್ರಾಮ ಪಂಚಾಯಿತಿಯಿಂದ ಅನುಮೋದನೆ ಪಡೆದು ಹಣ ಪಾವತಿಸಲು ಸರ್ಕಾರ ಆದೇಶ ಹೊರಡಿಸಿದೆಯೇ?

ಆ) 2001-2002ನೇ ಸಾಲಿನಲ್ಲಿ ಜಿಲ್ಲಾ ಪಂಚಾಯಿತಿ, ಗ್ರಾಮ ಪಂಚಾಯಿತಿಗಳಿಗೆ ವಿವಿಧ ಶೀರ್ಷಿಕೆಗಳಲ್ಲಿ ನಿಗಧಿಯಾದ ಹಣವೆಷ್ಟು? ಈವರೆವಿಗೆ ಬಿಡುಗಡೆ ಮಾಡಿರುವ ಹಣವೆಷ್ಟು? (ಜಿಲ್ಲಾವಾರು ವಿವರ ನೀಡುವುದು).

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ಹೌದು

ಆ) ಅನುಬಂಧ-1ರಲ್ಲಿ ವಿವರ ನೀಡಲಾಗಿದೆ.

ಅನುಬಂಧ-1

2001-02ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತಿಗಳಿಗೆ ನಿಗದಿಪಡಿಸಿರುವ ಮತ್ತು ಬಿಡುಗಡೆ ಮಾಡಿರುವ ಹಣದ ಜಿಲ್ಲಾವಾರು ವಿವರಣಾ ಪಟ್ಟಿ

(ರೂ. ಕೋಟಿಗಳಲ್ಲಿ)

ಕ್ರಮ ಸಂಖ್ಯೆ	ಜಿಲ್ಲಾ ಪಂಚಾಯತ್	ನಿಗದಿ ಮಾಡಿರುವ ಅನುದಾನ	ಬಿಡುಗಡೆ ಮಾಡಿರುವ ಅನುದಾನ
1	2	3	4
1	ಬೆಂಗಳೂರು (ನಗರ)	224.73	212.80
2	ಬೆಂಗಳೂರು (ಗ್ರಾಮಾಂತರ)	190.89	215.31
3	ಚಿತ್ರದುರ್ಗ	87.34	93.16
4	ಕೋಲಾರ	248.48	247.10
5	ತುಮಕೂರು	280.85	258.42
6	ಶಿವಮೊಗ್ಗ	144.82	134.82
7	ದಾವಣಗೆರೆ	178.82	164.04
8	ಬೆಳಗಾಂ	125.14	112.16
9	ಬಳ್ಳಾರಿ	164.88	153.17
10	ಬಿಜಾಪುರ	176.54	186.36
11	ಬಾಗಲಕೋಟೆ	136.74	140.84
12	ಬೀದರ್	60.07	80.29

1	2	3	4
13	ಗುಲ್ಬರ್ಗಾ	288.89	246.90
14	ರಾಯಚೂರು	120.78	121.84
15	ಮೈಸೂರು	81.29	98.45
16	ಮಂಡ್ಯ	190.65	203.10
17	ಕೊಡಗು	76.62	71.02
18	ಚಿಕ್ಕಮಗಳೂರು	155.06	166.68
19	ಚಾಮರಾಜನಗರ	95.66	92.47
20	ಗದಗ	88.19	86.33
21	ಹಾವೇರಿ	112.67	104.27
22	ಧಾರವಾಡ	135.45	141.20
23	ಕೊಪ್ಪಳ	97.69	108.04
24	ದಕ್ಷಿಣ ಕನ್ನಡ	58.26	50.38
25	ಉತ್ತರ ಕನ್ನಡ	188.73	174.73
26	ಹಾಸನ	202.41	186.73
27	ಉಡುಪಿ	113.98	115.05
	ಒಟ್ಟು	**4025.63**	**3965.66**

ಅನುಬಂಧ-2

2001-02ನೇ ಸಾಲಿನಲ್ಲಿ ಗ್ರಾಮ ಪಂಚಾಯತ್‌ಗಳಿಗೆ ಬಿಡುಗಡೆಗೊಳಿಸಿದ ಮೊತ್ತದ ಜಿಲ್ಲಾವಾರು ವಿವರಣಾ ಪಟ್ಟಿ

(ರೂ. ಕೋಟಿಗಳಲ್ಲಿ)

ಕ್ರಮ ಸಂಖ್ಯೆ	ಜಿಲ್ಲಾ ಪಂಚಾಯತ್	ಬಿಡುಗಡೆಗೊಳಿಸಿದ ಮೊತ್ತ
1	2	3
1	ಬೆಂಗಳೂರು (ನಗರ)	7.65
2	ಬೆಂಗಳೂರು (ಗ್ರಾಮಾಂತರ)	13.30
3	ಚಿತ್ರದುರ್ಗ	12.09
4	ಕೋಲಾರ	18.41
5	ಶಿವಮೊಗ್ಗ	11.06
6	ತುಮಕೂರು	18.80
7	ಮೈಸೂರು	12.00
8	ಚಿಕ್ಕಮಗಳೂರು	10.27
9	ದಕ್ಷಿಣ ಕನ್ನಡ	9.16
10	ಹಾಸನ	14.61

1	2	3
11	ಕೊಡಗು	6.09
12	ಮಂಡ್ಯ	10.93
13	ಬೆಳಗಾಂ	21.62
14	ಬಿಜಾಪುರ	10.73
15	ಧಾರವಾಡ	6.91
16	ಉತ್ತರ ಕನ್ನಡ	10.14
17	ಗುಲ್ಬರ್ಗಾ	20.34
18	ಬಳ್ಳಾರಿ	10.67
19	ಬೀದರ್	10.32
20	ರಾಯಚೂರು	9.63
21	ದಾವಣಗೆರೆ	12.39
22	ಚಾಮರಾಜನಗರ	6.96
23	ಉಡುಪಿ	7.03
24	ಬಾಗಲಕೋಟೆ	8.95
25	ಗದಗ್	6.10
26	ಹಾವೇರಿ	10.53
27	ಕೊಪ್ಪಳ	7.74
	ಒಟ್ಟು	304.47

ಕುಂದಾಪುರ ವಿಧಾನಸಭಾ ಕ್ಷೇತ್ರದಲ್ಲಿ ಪಂಚಾಯತ್ ರಾಜ್ ಕಾರ್ಯದರ್ಶಿಗಳ ವರ್ಗಾವಣೆ ಮತ್ತು ನಿಯೋಜನೆ

248 (422) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) - ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕುಂದಾಪುರ ವಿಧಾನಸಭಾ ಕ್ಷೇತ್ರದಲ್ಲಿ 2001-02ನೇ ಸಾಲಿನಲ್ಲಿ ಎಷ್ಟು ಜನ ಯಾವ ಪಂಚಾಯತ್ ಕಾರ್ಯದರ್ಶಿಗಳನ್ನು ವರ್ಗಾಯಿಸಲಾಗಿದೆ ಮತ್ತು ಹೆಚ್ಚುವರಿ ಹೊಣೆ ಮಹಿಸಲಾಗಿದೆ; (ಪಂಚಾಯತ್‌ವಾರು ಕಾರ್ಯದರ್ಶಿಗಳ ಹೆಸರು ಸಮೇತ ಕೊಡುವುದು) ;

ಆ) ಈ ವರ್ಗಾವಣೆ, ನಿಯೋಜನೆ, ಪ್ರಭಾರಗಳು ನಿಯಮಾನುಸಾರ ಮಾಡಲಾಗಿದೆಯೇ; ಈ ರೀತಿ ಮಾಡಲು ಅವಕಾಶವಿದೆಯೇ ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) 2001-02ನೇ ಸಾಲಿನಲ್ಲಿ ಯಾವುದೇ ಗ್ರಾಮ ಪಂಚಾಯತ್ ಕಾರ್ಯದರ್ಶಿಯವರನ್ನು ವರ್ಗಾವಣೆ ಮಾಡಿರುವುದಿಲ್ಲ. ಹೆಚ್ಚುವರಿ ಪ್ರಭಾರವನ್ನು ಮಾಡಲಾದ ಗ್ರಾಮ ಪಂಚಾಯತ್ ಕಾರ್ಯದರ್ಶಿಗಳ ವಿವರ ಈ ಕೆಳಗಿನಂತಿದೆ.